# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-146 ಲಕ್ಕಸಂದ್ರ ಕಛೇರಿಯಲ್ಲಿ ದಿನಾಂಕ: 18.12.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ವಿಷಯ: ವಾರ್ಡ್ ಸಮಿತಿ ಸಭೆಯ ಬಗ್ಗೆ

ಉಲ್ಲೇಖ: ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳುನ್ನು ನೇಮಿಸಿರುವ ಕಛೇರಿ ಆದೇಶ ಸಂಖ್ಯೆ ಬಿ12(5)ಪಿ.ಆರ್/35/20-21, ದಿನಾಂಕ: 16.04.2021

*****

ಉಲ್ಲೇಖ(1) ರ ಸಭಾ ಸುಚನಾ ಪತ್ರದ ಅನುಸಾರ ದಿನಾಂಕ: 18.12.2021 ರಂದು ಲಕ್ಕಸಂದ್ರ ವಾರ್ಡ್ ಸಂ 146ರ ಕಾರ್ಯಲಯದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಯೋಗೇಶ್.ಕೆ.ಪಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು | 9902083785 / 9480688231 |
| 2 | ಶ್ರೀ.ನರೇಶ್‌ಕುಮಾರ್ ಕೆ ಸ.ಇಂ ವಾರ್ಡ್ 146 ಲಕ್ಕಸಂದ್ರ (ಪ್ರಭಾರ) | 9844407499 |
| 3 | ಶ್ರೀಮತಿ ರೂಪ ಹಿರಿಯ ಆರೋಗ್ಯಾಧಿಕಾರಿಗಳು | 9591399429 |
| 4 | ಶ್ರೀ ಸಂದೀಪ್ ವಿ ಕೆಲಸ ಪರಿವೀಕ್ಷಕರು | 9513342625 |
| 5 | ಶ್ರೀ.ವಿಜಯ್ ಕಿರಿಯ ಆರೋಗ್ಯಾಧಿಕಾರಿಗಳು | 9738721476 |
| 6 | ಶ್ರೀ ಪರಶುರಾಮ ಕೆ ಕಂದಾಯ ಪರಿವೀಕ್ಷಕರು | 9916666134 |
| 7 | ಶ್ರೀ ಮುಹೀಬುಲ್ಲಾ ಹೆಚ್.ಎಮ್ ಮೌಲ್ಯಮಾಪಕರು | 9886306562 |

* * * * * *

ದಿನಾಂಕ-18-12-2021 ರಂದು ಬೆಳಿಗ್ಗೆ 10.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

**1) ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ, ಶ್ರೀ ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ಅನೇಕ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಒಣತ್ಯಾಜ್ಯ ಸಂಗ್ರಹಣ ಘಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತ್ಯಾಜ್ಯ ಸಂಗ್ರಹವಾಗಿದ್ದು, ಕೂಡಲೇ ತೆರವುಗೊಳಿಸಲು ಕೋರಿದರು. ಈ ಸಂಬಂಧ, ಸಂಬಂಧಿಸಿದ ಮೇಲ್ವಿಚಾರಕರಿಗೆ ತಿಳಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.



Scanned with CamScanner

ಕ್ರಮ:- ಈ ಬಗ್ಗೆ ಸಂಬಂಧ ಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಘ.ತ್ಯಾನಿ ರವರು ಕ್ರಮವಹಿಸುವಂತೆ ಸೂಚಿಸಿದರು.

ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 146 ರವರು ಮಾತನಾಡಿ ಸಮರ್ಪಕವಾಗಿ ಮುಖ್ಯರಸ್ತೆಗಳಲ್ಲಿ ಸರಿಯಾಗಿ ಕಸ ಗುಡುಸುತ್ತಿರುವುದಿಲ್ಲ ಹಾಗೂ ಕರ್ಬ್ ಪಕ್ಕದಲ್ಲಿ ಬಿದ್ದಿರುವ ಮಣ್ಣನ್ನು ಸಹ ತೆರವುಗೊಳಿಸುವುದಿಲ್ಲವೆಂದು ತಿಳಿಸಿದರು. ಈ ಬಗ್ಗೆ ಹಿಂದಿನ ಸಭೆಯಲ್ಲಿ ತಿಳಿಸಿರುವಂತೆ ಶ್ರೀ ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ದೂರಿನ ಬಗ್ಗೆ ಕೂಡಲೇ ಕ್ರಮವಹಿಸಿರುವುದಾಗಿ ಸಭೆಗೆ ತಿಳಿಸಿದರು.

**2) ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ ಬಗ್ಗೆ.**

ಸಹಾಯಕ ಅಭಿಯಂತರರು ಮಾತನಾಡಿ, ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಮತ್ತು ಮೈಕೋ ಮುಖ್ಯರಸ್ತೆ ಒಳಚರಂಡಿ ಕೊಳವೆ ಅಳವಡಿಸಲು ಅಗೆದಿರುವ ರಸ್ತೆಯನ್ನು ಯಥಾಸ್ಥಿತಿಗೆ ಶೇ 90% ತಂದಿದ್ದು, ಹಾಗೂ ಕೂಡಲೇ ಉಳಿದ ರಸ್ತೆ ಗುಂಡಿಗಳನ್ನು ಮುಚ್ಚಲು ಮತ್ತು ಅನುಪಯುಕ್ತ ಮಣ್ಣನ್ನು ತೆರವುಗೊಳಿಸಲು ತಿಳಿಸಿದರು. ಈ ಬಗ್ಗೆ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳ ಜೊತೆ ದೂರವಾಣಿ ಮುಖೇನ ಚರ್ಚಿಸಿ ಕ್ರಮವಹಿಸಲು ಕೋರಲಾಯಿತು.

**3) ಕೋವಿಡ್ ನಿರ್ವಹಣೆ ಮಾಡುವಬಗ್ಗೆ.**

ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೂಪಾಂತರಿ ಓಮಿಕ್ರಾನ್ ರೋಗ ಮೂರನೇ ಅಲೆ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಬೇಕು ಹಾಗೂ ಮಾಸ್ಕ್ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

**4) ಕಾಮಗಾರಿಗಳ ಅನುಮೋದನೆ ಬಗ್ಗೆ**

2021-22ನೇ ಸಾಲಿನ ಕೊಳವೆಬಾವಿಗಳ ನಿರ್ವಹಣೆ ಜೊತೆ ದುರಸ್ಥಿ ಕಾಮಗಾರಿ, ರಸ್ತೆ ನಿರ್ವಹಣೆ ಮತ್ತು ಚರಂಡಿಯಲ್ಲಿ ಹೂಳೆತ್ತುವ ಕಾಮಗಾರಿಗಳ ಬಗ್ಗೆ ಸಭೆಯ ಕಾರ್ಯದರ್ಶಿಯವರು ಮಾತನಾಡಿ, ಮೇಲ್ಕಂಡ ವಿಷಯದ ಬಗ್ಗೆ ಈ ಕೆಳಗೆ ನಮೂದಿಸಿರುವ 3 ಕಾಮಗಾರಿಗಳನ್ನು ನಿರ್ವಹಿಸುವಸಲುವಾಗಿ ಹಾಗೂ ಮಾನ್ಯ ಮುಖ್ಯ ಅಭಿಯಂತರರು ರವರ ಟಿಪ್ಪಣಿ ಹಾಳೆಯ ಆದೇಶದ ಸಂಖ್ಯೆ ಮು.ಅ(ದ)/ಜಿ.ಎಲ್/770/21-22 ಮತ್ತು ಮು.ಅ(ದ)/ಜಿ.ಎಲ್/771/21-22ರ ಆದೇಶದನ್ವಯ ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿ ಮೇರೆಗೆ ಅತೀ ಜರೂರಾಗಿ ನಿರ್ವಹಿಸಬೇಕಾಗಿರುವುದರಿಂದ ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರಮುಂದೆ ಪ್ರಸ್ತಾಪಿಸಲಾಗಿ, ಸಹಮತ ದೊರೆತ್ತಿರುತ್ತದೆ.

1) **Annual Maintenance of Borewells and Water Supply lines in ward No 146 Lakkasandra – 20.00 Lakhs**
2) **Maintenance of Footpath drains and re-asphalting of damaged roads in ward No 146 Lakkasandra – 20.00 Lakhs**
3) **Filling of potholes in ward jurisdiction in ward No 146 Lakkasandra- 20.00 Lakhs**



Scanned with CamScanner

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು

18/12/2024

ಕಾರ್ಯದರ್ಶಿಗಳು,

ವಾರ್ಡ್ ಸಂಖ್ಯೆ:146, ಲಕ್ಕಸಂದ್ರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

19. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
20. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
21. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
22. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
23. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
24. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
25. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
26. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
27. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ



Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ ಶ್ರೀ.ಯೋಗೇಶ್.ಕೆ.ಪಿ. ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ 146ರ ರವರ ಅಧ್ಯಕ್ಷತೆಯಲ್ಲಿ ಲಕ್ಕಸಂದ್ರ ವಾರ್ಡ್ ಸಂ 146ರ ಕಾರ್ಯಲಯ ಬೆಂಗಳೂರು ದಿನಾಂಕ: 18.12.2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರೊಂದಿಗೆ ಚರ್ಚಿಸಿ, 2021–22ನೇ ಸಾಲಿನ ಕೊಳವೆಬಾವಿಗಳ ನಿರ್ವಹಣೆ ಜೊತೆ ದುರಸ್ಥಿ ಕಾಮಗಾರಿ, ರಸ್ತೆ ನಿರ್ವಹಣೆ ಮತ್ತು ಚರಂಡಿಯಲ್ಲಿ ಹೂಳೆತ್ತುವ ಕಾಮಗಾರಿಗಳ ಬಗ್ಗೆ ಸಭೆಯ ಕಾರ್ಯದರ್ಶಿಯವರು ಮಾತನಾಡಿ, ಈ ವಿಷಯದ ಬಗ್ಗೆ ಈ ಕೆಳಗೆ ನಮೂದಿಸಿರುವ 3 ಕಾಮಗಾರಿಗಳನ್ನು ನಿರ್ವಹಿಸುವಸಲುವಾಗಿ ಹಾಗೂ ಮಾನ್ಯ ಮುಖ್ಯ ಅಭಿಯಂತರರು ರವರ ಟಿಪ್ಪಣಿ ಹಾಳೆಯ ಆದೇಶದ ಸಂಖ್ಯೆ ಮು.ಅ(ದ)/ಜಿ.ಎಲ್/770/21–22 ಮತ್ತು ಮು.ಅ(ದ)/ಜಿ.ಎಲ್/771/21–22ರ ಆದೇಶದನ್ವಯ ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿ ಮೇರೆಗೆ ಅತೀ ಜರೂರಾಗಿ ನಿರ್ವಹಿಸಬೇಕಾಗಿರುವುದರಿಂದ ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರಮುಂದೆ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯಲ್ಲಿ ಎಲ್ಲಾ ಸದಸ್ಯರು ಪ್ರಸ್ತಾಪಿತ ಕಾಮಗಾರಿಗಳ ಬಗ್ಗೆ ಚರ್ಚಿಸಿ ಪ್ರಸ್ತಾಪಿಸಿರುವ ಕಾಮಗಾರಿಗಳು ಅವಶ್ಯವಿರುವುದಾಗಿ ಒಕ್ಕೂರುಲಿಂದ ಸಹಮತಿ ವ್ಯಕ್ತಪಡಿಸುತ್ತಾ, ಒಪ್ಪಿ ಸಹಿ ಮಾಡಿರುತ್ತಾರೆ.

ಕಾಮಗಾರಿಗಳ ವಿವರ:–

1) **Annual Maintenance of Borewells and Water Supply lines in ward No 146 Lakkasandra – 20.00 Lakhs**
2) **Maintenance of Footpath drains and re-asphalting of damaged roads in ward No 146 Lakkasandra – 20.00 Lakhs**
3) **Filling of potholes in ward jurisdiction in ward No 146 Lakkasandra- 20.00 Lakhs**

ಹಾಜರಿದ್ದ ಸದಸ್ಯರುಗಳು:–

| ಕ್ರಸಂ | ಹೆಸರು ಮತ್ತು ಪದನಾಮ | ಸಹಿ |
|---|---|---|
| 1 | M ಶ್ರೀನಿವಾಸ | [signature] |
| 2 | K. Viddyadhar JHE 146 | K. Viddyadhar |
| 3 | G. Mahesh | G. Mahesh |
| 4 | Srikanth. S (lakkasandra) | Srikanth. |
| 5 | Sandeep .V (Work Inspector) | [signature] |
| 6 | Savitree. K (Samarthanam) | [signature] |
| 7 | GOPINATH. S BWSSB | [signature] |
| 8 | Ravi (Operator operator) | [signature] |
| 9 | | |
| 10 | | |

[signature] 18/12/2021
(ಶ್ರೀ. ನರೇಶ್‌ಕುಮಾರ್.ಕೆ)
ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು,
ವಾರ್ಡ್–146 ಲಕ್ಕಸಂದ್ರ

[signature] 18/12/21
(ಶ್ರೀ.ಯೋಗೇಶ್.ಕೆ.ಪಿ)
ಅಧ್ಯಕ್ಷರು/ ನೋಡಲ್ ಅಧಿಕಾರಿಗಳು ವಾರ್ಡ್ 146
ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು
ಬಿ.ಬಿ.ಎಂ.ಪಿ

Scanned with CamScanner